**Akashvani: Bangalore**
**National Bulletin In Kannada**
**07.04.2025 / 13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**07.04.2025 / 13.10 hrs**

**<><*<><>*><>**

ಮುಖ್ಯಾಂಶಗಳು

೧. ಪ್ರಧಾನಮಂತ್ರಿ ಮುದ್ರಾ ಯೋಜನೆ ಕಳೆದ ೧೦ ವರ್ಷಗಳಲ್ಲಿ ೫೨ ಕೋಟಿ ಸಾಲ ಮಂಜೂರು

೨. ವಿಶ್ವ ಆರೋಗ್ಯ ದಿನ ಹಿನ್ನೆಲೆ ; ಆರೋಗ್ಯಕರ ಜಗತ್ತು ನಿರ್ಮಿಸುವ ಬದ್ಧತೆಯನ್ನು ಪುನರುಚ್ಚರಿಸಿದ ಪ್ರಧಾನಿ

೩. ಭಾರತದ ಷೇರು ಮಾರುಕಟ್ಟೆ ಭಾರೀ ಕುಸಿತ ; ಕೋಟ್ಯಂತರ ರೂಪಾಯಿ ಸಂಪತ್ತು ನಷ್ಟ

೪. ಐಪಿಎಲ್ ಟಿ-೨೦ ಕ್ರಿಕೆಟ್ : ಮುಂಬೈ ಇಂಡಿಯನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಖಾಮುಖಿ

**<><*<><>*><>**

ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿಯಲ್ಲಿ ಕಳೆದ ೧೦ ವರ್ಷಗಳಲ್ಲಿ ೩೨ ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ೫೨ ಕೋಟಿ ಸಾಲವನ್ನು ಮಂಜೂರು ಮಾಡಲಾಗಿದೆ. ಕಾರ್ಪೋರೇಟ್ ಅಲ್ಲದ, ಕೃಷಿಯೇತರ ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳಿಗೆ ೧೦ ಲಕ್ಷ ರೂಪಾಯಿಗಳವರೆಗೆ ಮೇಲಾಧಾರ ರಹಿತ ಸಾಲಗಳನ್ನು ಒದಗಿಸಲು ಈ ಯೋಜನೆಯನ್ನು ೨೦೧೫ರಲ್ಲಿ ಕೇಂದ್ರ ಸರ್ಕಾರದಿಂದ ಪ್ರಾರಂಭಿಸಲಾಯಿತು. ಇದು ಆರ್ಥಿಕ ಸೇರ್ಪಡೆಗೆ ಅನುಕೂಲವಾಗುವಂತೆ ಮತ್ತು ಉದ್ಯಮಿಗಳನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯಡಿಯಲ್ಲಿ ಮೂರು ವರ್ಷಗಳ ಅವಧಿಗೆ ಸಾಲವನ್ನು ನೀಡಲಾಗುತ್ತಿದೆ. ಇದರಲ್ಲಿ ೫೦ ಸಾವಿರ ರೂಪಾಯಿವರೆಗಿನ ಶಿಶು ಸಾಲ, ೫ ಲಕ್ಷ ರೂಪಾಯಿಗಳವರೆಗೆ ಕಿಶೋರ್ ಸಾಲ ಮತ್ತು ೧೦ ಲಕ್ಷ ರೂಪಾಯಿಗಳವರೆಗೆ ತರುಣ್ ಸಾಲ ಎಂದು ಮೂರು ವಿಭಾಗಗಳಲ್ಲಿ ಸಾಲ ನೀಡಲಾಗುತ್ತಿದೆ. ಮುದ್ರಾ ಸಾಲಗಳನ್ನು ಶೇಕಡ ೭೦ರಷ್ಟು ಮಹಿಳಾ ಉದ್ಯಮಿಗಳು ಬಳಸಿಕೊಳ್ಳುವ ಮೂಲಕ ತಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಬಲಪಡಿಸಿಕೊಳ್ಳುತ್ತಿದ್ದಾರೆ.

**<><*<><>*><>**

ಆರೋಗ್ಯಕರ ಆರಂಭಗಳು, ಭರವಸೆಯ ಭವಿಷ್ಯ ಘೋಷವಾಕ್ಯದಡಿಯಲ್ಲಿ ದೇಶದೆಲ್ಲೆಡೆ, ಇಂದು ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಆರೋಗ್ಯಕರ ಜಗತ್ತನ್ನು ನಿರ್ಮಿಸುವ ತಮ್ಮ ಬದ್ಧತೆಯನ್ನು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದ್ದಾರೆ. ಸರ್ಕಾರವು ಆರೋಗ್ಯ ರಕ್ಷಣೆಯತ್ತ ಗಮನಹರಿಸುವುದನ್ನು ಮತ್ತು ಜನರ ಯೋಗಕ್ಷೇಮದ ವಿವಿಧ ಅಂಶಗಳಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸುತ್ತದೆ, ಎಂದು ಅವರು ತಮ್ಮ ಸಂದೇಶದಲ್ಲಿ ನುಡಿದರು. ವರದಿಯೊಂದನ್ನು ಉಲ್ಲೇಖಿಸಿ ಮಾತನಾಡಿದ ಪ್ರಧಾನಿ, ೨೦೫೦ ರ ವೇಳೆಗೆ ೪೪ ಕೋಟಿ ಭಾರತೀಯರು ಸ್ಥೂಲಕಾಯದಿಂದ ಬಳಲಲಿದ್ದಾರೆ ಎಂದು ಅದು ತಿಳಿಸಿದೆ ಎಂದರು. ಪ್ರತಿಯೊಬ್ಬರೂ ತಮ್ಮ ಆಹಾರದಲ್ಲಿ ಕನಿಷ್ಠ ಶೇಕಡಾ ೧೦ ರಷ್ಟು ಎಣ್ಣೆ ಅಂಶವನ್ನು ಕಡಿಮೆ ಮಾಡುವಂತೆ ಮತ್ತು ವ್ಯಾಯಾಮವನ್ನು ಜನರ ಜೀವನಶೈಲಿಯ ಭಾಗವಾಗಿಸಿಕೊಳ್ಳುವಂತೆ ಅವರು ಪ್ರೋತ್ಸಾಹಿಸಿದರು.

ಧ್ವನಿ : ಪ್ರಧಾನಮಂತ್ರಿ (೨೪ ಸೆಕೆಂಡ್‌ಗಳು)

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಪೋರ್ಚುಗಲ್ ಮತ್ತು ಸ್ಲೋವಾಕಿಯಾ ಪ್ರವಾಸದ ಭಾಗವಾಗಿ, ಮೊದಲ ಚರಣದಲ್ಲಿ ಇಂದು ಬೆಳಿಗ್ಗೆ ಲಿಸ್ಬನ್‌ಗೆ ಆಗಮಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಪೋರ್ಚುಗಲ್ ಸಹವರ್ತಿ ಮಾರ್ಸೆಲೊ ರೆಬೆಲೊ ಡಿ ಸೌಸಾ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಪ್ರಧಾನಿ ಲೂಯಿಸ್ ಮಾಂಟೆನೆಗ್ರೊ ಮತ್ತು ಸಂಸತ್ತಿನ ಸ್ಪೀಕರ್ ಜೋಸ್ ಪೆಡ್ರೊ ಅಗುಯರ್ ಬ್ರಾಂಕೊ ಅವರನ್ನು ಸಹ ರಾಷ್ಟ್ರಪತಿ ಭೇಟಿ ಮಾಡಲಿದ್ದಾರೆ. ಲಿಸ್ಬನ್ ಮೇಯರ್, ರಾಷ್ಟ್ರಪತಿ ಅವರ ಗೌರವಾರ್ಥ ವಿಶೇಷ ಕಾರ್ಯಕ್ರಮ ಆಯೋಜಿಸಲಿದ್ದಾರೆ.

<><*<><>*><>

ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ರಾಜ್ಯ ಸಚಿವರ ಸಮ್ಮೇಳನದ ಸಂದರ್ಭದಲ್ಲಿ, ಪರಿಷ್ಕೃತ ಮೈಕ್ರೋಡೇಟಾ ಪೋರ್ಟಲ್‌ಗೆ ಚಾಲನೆ ನೀಡಿದೆ. ಅಧಿಕೃತ ಅಂಕಿ-ಅಂಶ ವ್ಯವಸ್ಥೆಯಲ್ಲಿ, ದತ್ತಾಂಶ ಅಳವಡಿಕೆ, ಬಳಕೆದಾರರ ಅನುಭವ ಮತ್ತು ಸುಧಾರಿತ ತಂತ್ರಜ್ಞಾನಗಳ ಏಕೀಕರಣವನ್ನು ಹೆಚ್ಚಿಸುವಲ್ಲಿ ಇದು ಮಹತ್ವದ ಹೆಜ್ಜೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ರಾಷ್ಟ್ರೀಯ ಸಮೀಕ್ಷೆಗಳು ಮತ್ತು ಆರ್ಥಿಕ ಜನಗಣತಿಯಿಂದ ಸಂಗ್ರಹಿಸಲಾದ ಅಂಕಿ-ಅಂಶ ದತ್ತಾಂಶಕ್ಕಾಗಿ, ಕೇಂದ್ರೀಕೃತ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವ ಹೊಸ ಪೋರ್ಟಲ್, ಹಿಂದಿನ ಪೋರ್ಟಲ್ ಎದುರಿಸುತ್ತಿರುವ ತಾಂತ್ರಿಕ ಮಿತಿಗಳನ್ನು ನಿವಾರಿಸುತ್ತದೆ ಎಂದು ಸಚಿವಾಲಯ ಹೇಳಿದೆ. ವಿಶ್ವ ಬ್ಯಾಂಕ್ ತಂತ್ರಜ್ಞಾನ ತಂಡದ ಸಹಯೋಗದೊಂದಿಗೆ, ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು, ಇದು ಇತ್ತೀಚಿನ ಭದ್ರತಾ ಮಾನದಂಡಗಳ ಅನುಸರಣೆಯನ್ನು

ಖಚಿತಪಡಿಸುವುದಲ್ಲದೆ, ವಿನ್ಯಾಸ ಮತ್ತು ದತ್ತಾಂಶ ಪ್ರವೇಶ ಕಾರ್ಯವಿಧಾನವನ್ನು ಬೆಂಬಲಿಸುತ್ತದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ ೨೭ ರಂದು ಆಕಾಶವಾಣಿಯಲ್ಲಿ ನಡೆಯುವ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೨೧ ನೇ ಸಂಚಿಕೆಯಾಗಲಿದೆ. ಜನರು ಟೋಲ್-ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಕಾರ್ಯಕ್ರಮಕ್ಕಾಗಿ ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು ಸಲ್ಲಿಸಬಹುದು. ಅವರು ನರೇಂದ್ರ ಮೋದಿ ಅಪ್ಲಿಕೇಶನ್ ಅಥವಾ ಮೈಗವ್ ಓಪನ್ ಫೋರಂ ಮೂಲಕ ಆನ್‌ಲೈನ್‌ನಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ಮುಂಬರುವ ಸಂಚಿಕೆಗೆ ಸಲಹೆಗಳನ್ನು ಈ ತಿಂಗಳ ೨೫ ರವರೆಗೆ ಸ್ವೀಕರಿಸಲಾಗುತ್ತದೆ.

<><*<><>*><>

ಅಮೆರಿಕ ತೆರಿಗೆ ನೀತಿ ಹಾಗೂ ಜಾಗತಿಕ ಆರ್ಥಿಕ ಅನಿಶ್ಚಿತತೆ ಹಿನ್ನೆಲೆಯಲ್ಲಿ ಭಾರತದ ಷೇರು ಮಾರುಕಟ್ಟೆ ಆರಂಭದಲ್ಲೇ ಕುಸಿತ ಕಂಡಿದೆ. ಸೆನ್ಸೆಕ್ಸ್ ೨ ಸಾವಿರದ ೬೯೦ ಅಂಕಗಳು ಕುಸಿತ ಕಂಡಿದ್ದು, ನಿಫ್ಟಿ ೮೮೧ ಅಂಕ ಕುಸಿತ ಕಂಡಿದೆ. ಇದೇ ವೇಳೆ ಪ್ರಮುಖ ಕಂಪನಿಗಳಾದ ಟಾಟಾ ಸ್ಟೀಲ್, ಟಾಟಾ ಮೋಟರ್, ಇನ್ಫೋಸಿಸ್, ಟಿಸಿಎಸ್, ರಿಲಯನ್ಸ್ ಇಂಡಿಸ್ಟ್ರೀಸ್ ಹಾಗೂ ಪ್ರಮುಖ ಬ್ಯಾಂಕ್‌ಗಳ ಷೇರುಗಳು ಕುಸಿತ ಕಂಡಿವೆ. ಇದರಿಂದ ಹೂಡಿಕೆದಾರರ ಕೋಟ್ಯಾಂತರ ರೂಪಾಯಿ ಸಂಪತ್ತು ಕೆಲವೇ ನಿಮಿಷಗಳಲ್ಲಿ ನಷ್ಟವಾಗಿದೆ. ಭಾರತೀಯ ಹೂಡಿಕೆದಾರರು ಸುಮಾರು ೨೦.೧೬ ಲಕ್ಷ ಕೋಟಿ ರೂಪಾಯಿ ನಷ್ಟ ಅನುಭವಿಸಿದ್ದಾರೆ.

<><*<><>*><>

ಏಷ್ಯಾದ ಷೇರು ಮಾರುಕಟ್ಟೆಗಳು ಇಂದು ಭಾರೀ ಕುಸಿತದೊಂದಿಗೆ ಆರಂಭಗೊಂಡಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ತೆರಿಗೆಗಳನ್ನು ಸಮರ್ಥಿಸಿಕೊಂಡಿದ್ದರ ಹಿನ್ನೆಲೆ ಈ ಬೆಳವಣಿಗೆ ಕಂಡು ಬಂದಿದೆ. ಷೇರು ಮಾರುಕಟ್ಟೆಯಲ್ಲಿ ಯಾವುದೇ ಬದಲಾವಣೆ ತಾತ್ಕಾಲಿಕವಾಗಿರುತ್ತದೆ ಎಂದು ಟ್ರಂಪ್ ಹೇಳಿದ್ದಾರೆ.

<><*<><>*><>

ನೌಕಾ ಕಮಾಂಡರ್‌ಗಳ ಸಮ್ಮೇಳನ -೨೦೨೫ರ ಮೊದಲ ಆವೃತ್ತಿಯ ೨ನೇ ಹಂತವು ಇಂದು ನವದೆಹಲಿಯಲ್ಲಿ ಪ್ರಾರಂಭವಾಗಲಿದೆ. ೪ ದಿನಗಳ ಈ ಸಮ್ಮೇಳನವು ಉನ್ನತ ನೌಕಾ ಕಮಾಂಡರ್ ಮಟ್ಟದಲ್ಲಿ ಮಹತ್ವದ ಕಾರ್ಯತಂತ್ರ, ಕಾರ್ಯಾಚರಣೆ ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ಚರ್ಚೆಗೆ ವೇದಿಕೆ ಒದಗಿಸಲಿದೆ. ಸಮ್ಮೇಳನವು ಉನ್ನತ ಮಟ್ಟದ ದ್ವೈವಾರ್ಷಿಕ ಕಾರ್ಯಕ್ರಮವಾಗಿದ್ದು, ಅದರ ಮೊದಲ ಹಂತವು ಏಪ್ರಿಲ್ ೫ ರಂದು ಕರ್ನಾಟಕದ ಕಾರವಾರದಲ್ಲಿ ನಡೆಯಿತು. ೨ನೇ ಹಂತದ ಕಾರ್ಯಕ್ರಮವು ಕಾರ್ಯಾಚರಣೆಗಳು, ಲಾಜಿಸ್ಟಿಕ್ಸ್, ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ ಮತ್ತು ಆಡಳಿತ ಸೇರಿದಂತೆ ವಿವಿಧ ಅಂಶಗಳ ಕುರಿತು ವ್ಯಾಪಕ ಚರ್ಚೆಗಳನ್ನು ಒಳಗೊಂಡಿರುತ್ತದೆ.

<><*<><>*><>

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ - ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಇಂದಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೭:೩೦ಕ್ಕೆ ಆರಂಭವಾಗಲಿದೆ. ಆಡಿದ ೪ ಪಂದ್ಯಗಳ ಪೈಕಿ ಮುಂಬೈ ತಂಡ ಒಂದರಲ್ಲಿ ಮಾತ್ರ ಜಯಗಳಿಸಿದ್ದು, ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಮತ್ತೊಂದೆಡೆ ತನ್ನ ಮೊದಲೆರಡು ಪಂದ್ಯಗಳಲ್ಲಿ ಜಯ ಸಾಧಿಸಿದ್ದ ಬೆಂಗಳೂರು ತಂಡ ಇತ್ತೀಚಿನ ಪಂದ್ಯದಲ್ಲಿ ಸೋಲನ್ನು ಅನುಭವಿಸಿತ್ತು. ಗಾಯದ ಸಮಸ್ಯೆಯಿಂದ ಚೇತರಿಸಿಕೊಂಡಿರುವ ವೇಗದ ಬೌಲರ್ ಜಸ್ಪ್ರೀತ್ ಬೂಮ್ರಾ ತಂಡಕ್ಕ ಮರಳಿದ್ದು, ಮುಂಬೈ ಬೌಲಿಂಗ್ ಪಡೆಗೆ ಹೆಚ್ಚಿನ ಬಲ ಬಂದಂತಾಗಿದೆ. ನಿನ್ನೆ ನಡೆದ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಗುಜರಾತ್ ಟೈಟಾನ್ಸ್ ೭ ವಿಕೆಟ್‌ಗಳ ಜಯ ಸಾಧಿಸಿದೆ.

<><*<><>*><>

ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನ್ನಿಸ್ ಟೂರ್ನಿಯ ಪುರುಷರ ಡಬಲ್ಸ್ ಪ್ರಿ ಕ್ವಾರ್ಟರ್ ಫೈನಲ್ಸ್ ಭಾರತೀಯ ಟೆನ್ನಿಸ್ ಆಟಗಾರ ರೋಹನ್ ಬೋಪಣ್ಣ ಮತ್ತು ಅಮೆರಿಕದ ಬೆನ್‌ಶೆಲ್ಟನ್ ಜೋಡಿ ಮುನ್ನಡೆ ಸಾಧಿಸಿದೆ. ಅವರು ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೋಲೋ ಮತ್ತು ಚಿಲಿಯ ಅಲೆಜಾಂಡ್ರೊ ಟಾಬಿಲೋ ಜೋಡಿಯನ್ನು ೬-೩, ೭-೫ ಅಂಕಗಳಿಂದ ಸೋಲಿಸಿದರು. ಇದೇ ವೇಳೆ, ಭಾರತದ ಅಗ್ರ ಶ್ರೇಯಾಂಕಿತ ಆಟಗಾರ ಯುಕಿ ಭಾಂಬ್ರಿ, ಆಸ್ಟ್ರೇಲಿಯನ್ ಸಹವರ್ತಿ ಅಲೆಕ್ಸಿ ಪೋಪಿರಿನ್ ಅವರೊಂದಿಗೆ ಇಂದು ಸಂಜೆ ಜರ್ಮನಿಯ ಜಾನ್ ಲೆನಾರ್ಡ್ ಸ್ಟ್ರಫ್ ಮತ್ತು ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನಾರ್ ವಿರುದ್ಧ ಆಡಲಿದ್ದಾರೆ.

<><*<><>*><>

ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಯಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆಯ ಕುರಿತು ಚರ್ಚಿಸಲು ಪ್ರಶ್ನೋತ್ತರ ಅವಧಿಯನ್ನು ಮುಂದೂಡಲು ನಿರಾಕರಿಸಿದಕ್ಕಾಗಿ ಉಂಟಾದ ಗದ್ದಲದ ನಡುವೆ ಸಭೆಯನ್ನು ೧೫ ನಿಮಿಷಗಳ ಕಾಲ ಮುಂದೂಡಲಾಯಿತು. ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ನಜೀರ್ ಗುರೇಜಿ ಮತ್ತು ತನ್ವೀರ್ ಸಾಧಿಕ್ ನೇತೃತ್ವದ ರಾಷ್ಟ್ರೀಯ ಸಮ್ಮೇಳನದ ಸದಸ್ಯರು ವಕ್ಫ್ ಕಾನೂನಿನ ಕುರಿತು ಚರ್ಚಿಸಲು ಪ್ರಶ್ನೋತ್ತರ ಅವಧಿಯನ್ನು ಮುಂದೂಡುವಂತೆ ಪ್ರಸ್ತಾವನೆ ಮಂಡಿಸಿದರು. ಇದನ್ನು ಬೆಂಬಲಿಸಿ ೯ ಸ್ವತಂತ್ರ್ಯ ಸದಸ್ಯರು ಸಭಾಧ್ಯಕ್ಷರಿಗೆ ನೋಟಿಸು ನೀಡಿದರು.

<><*<><>*><>

ಬ್ಯೂನಸ್ ಐರಿಸ್‌ನಲ್ಲಿ ನಿನ್ನೆ ನಡೆದ ಐ.ಸ್.ಎಸ್.ಎಫ್ (ಐಎಸ್ಎಸ್ಎಫ್) ವಿಶ್ವಕಪ್ ೨೦೨೫ ಪುರುಷರ ೧೦ ಮೀಟರ್ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಮಾಜಿ ವಿಶ್ವ ಚಾಂಪಿಯನ್ ರುದ್ರಾಂಕ್ಷ್ ಬಾಲಾಸಾಹೇಬ್ ಪಾಟೀಲ್ ಚಿನ್ನದ ಪದಕ ಗೆದ್ದಿದ್ದಾರೆ. ಪಾಟೀಲ್ ಅವರ ಗೆಲುವು ಈ ಋತುವಿನ ಮೊದಲ ಐ.ಸ್.ಎಸ್.ಎಫ್ ವಿಶ್ವಕಪ್‌ನಲ್ಲಿ ಭಾರತಕ್ಕೆ ನಾಲ್ಕನೇ ಪದಕವಾಗಿದೆ. ಸ್ಥಳೀಯ ತಾರೆ ಮಾರ್ಸೆಲೊ ಜೂಲಿಯನ್ ಗುಟ್ಟೆರೆಜ್ ೨೩೦.೧ ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು.

<><*<><>*><>

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯ ೩ ದಿನಗಳ ಸಭೆಯು ಇಂದು ಮುಂಬೈನಲ್ಲಿ ಆರಂಭವಾಗಲಿದೆ. ಪ್ರಮುಖ ಮಾನದಂಡ ಬಡ್ಡಿದರಗಳು ಅಥವಾ ರೆಪೊ ದರಗಳನ್ನು ಈ ಸಭೆಯು ನಿರ್ಧರಿಸುತ್ತದೆ. ಆರ್.ಬಿ.ಐ ಪ್ರತಿ ಎರಡು ತಿಂಗಳಿಗೊಮ್ಮೆ ಹಣಕಾಸು ನೀತಿ ಸಮಿತಿ ಸಭೆಯನ್ನು ನಡೆಸುತ್ತದೆ, ಒಟ್ಟಾಗಿ, ಒಂದು ಹಣಕಾಸು ವರ್ಷಕ್ಕೆ ಆರು ಸಭೆಗಳನ್ನು ಇದು ಗುರುತಿಸುತ್ತದೆ. ಹಣ ಪೂರೈಕೆ, ಹಣದುಬ್ಬರ ದೃಷ್ಟಿಕೋನ ಮತ್ತು ಇತರ ಸ್ಥೂಲ ಆರ್ಥಿಕ ಸೂಚಕಗಳಂತಹ ಬಹು ಅಂಶಗಳ ಆಧಾರದ ಮೇಲೆ ಬಡ್ಡಿದರಗಳನ್ನು ಈ ಸಭೇಗಳು ನಿರ್ಧರಿಸುತ್ತವೆ. ಇದು, ೨೦೨೫-೨೬ರ ಹಣಕಾಸು ವರ್ಷದ ಮೊದಲ ಹಣಕಾಸು ನೀತಿ ಸಭೆಯಾಗಿದ್ದು, ಬುಧವಾರ ಘೋಷಿಸಲಿರುವ ಕೇಂದ್ರ ಬ್ಯಾಂಕ್‌ನ ಪ್ರಮುಖ ಸಾಲ ದರಗಳ ಫಲಿತಾಂಶವನ್ನು ನಿರ್ಧರಿಸುತ್ತದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>